**<u>ಮುಖ್ಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹಾವೇರಿ.</u>**

**ಸಿ.ಸಿ.ನಂ.62/2020**

| | | | |
|---|---|---|---|
| ಸಾಕ್ಷಿದಾರರ ಹೆಸರು | ಕವಿತಾ ಮುದಿಯಪ್ಪನವರ | ಸಿಡಬ್ಲ್ಯೂ | 1 |
| ಗಂಡನ ಹೆಸರು | ಹನುಮಂತಪ್ಪ | ಪಿಡಬ್ಲ್ಯೂ | 1 |
| ವಯಸ್ಸು | 38 ವರ್ಷ | | |
| ಉದ್ಯೋಗ | ಗೃಹಿಣಿ | | |
| ವಾಸಸ್ಥಳ | ಹಾವೇರಿ. | | |

<u>ದಿಃ **25.09.2023** ರಂದು ಸಾಕ್ಷಿದಾರರನ್ನು ಕರೆಯಿಸಿ, ಪ್ರಮಾಣ ವಚನ ಬೋಧಿಸಲಾಯಿತು.</u>

**<u>ಮುಖ್ಯ ವಿಚಾರಣೆಃ ಹಿ.ಸ.ಸ.ಅಭಿಯೋಜಕರಿಂದ.</u>**

**1).** ಆರೋಪಿ ನನ್ನ ಗಂಡ. ದಿನಾಂಕಃ 28.05.2013 ರಂದು ಆರೋಪಿಯೊಂದಿಗೆ ನನ್ನ ಮದುವೆ ಬಸವೇಶ್ವರ ಕಲ್ಯಾಣ ಮಂಟಪ, ಗುತ್ತಲದಲ್ಲಿ ಸಂಪ್ರದಾಯದಂತೆ ಮದುವೆ ಆಗಿರುತ್ತದೆ. ಮದುವೆಯಾದ ನಂತರ ಆರೋಪಿಯ ಮನೆಗೆ ಸಂಸಾರಕ್ಕೆ ಹೋಗಿರುತ್ತೇನೆ. ಸ್ವಲ್ಪ ದಿನಗಳ ನಂತರ ಹೊಸರಿತ್ತಿಯಲ್ಲಿ ಬಾಡಿಗೆ ಮನೆಯಲ್ಲಿ ವಾಸ ಇದ್ದೇವು. ಸುಮಾರು ಎರಡು ವರ್ಷಗಳ ಕಾಲ ಬಾಡಿಗೆ ಮನೆಯಲ್ಲಿ ವಾಸ ಇದ್ದಾಗ ಚೆನ್ನಾಗಿ ನೋಡಿಕೊಂಡಿದ್ದರು. ಹೊಸರಿತ್ತಿಯಲ್ಲಿ ಖಾಸಗಿ ಶಾಲೆಯಲ್ಲಿ ಆರೋಪಿ ಶಿಕ್ಷಕರಾಗಿ ಕೆಲಸ ಮಾಡುತ್ತಿದ್ದರು. ನಂತರ ಹೊಸರಿತ್ತಿಯಲ್ಲಿಯೇ ಚಾ.ಸಾ-9 ರವರ ಮನೆಗೆ ಬಾಡಿಗೆಗೆ ಹೋದೇವು. ಆ ಮನೆಯಲ್ಲಿ ವಾಸವಿರುವಾಗ ಆರೋಪಿ ಮಧ್ಯಪಾನ ಮಾಡಿಕೊಂಡು ಬಂದು ಹೊಡೆಯುತ್ತಿದ್ದ. ನನ್ನ ಮಾವ ನಿಂಗಪ್ಪರವರಿಗೆ ಹೇಳಿದಾಗ ಅವರು ಬುದ್ದಿ ಹೇಳಿ, ಹೊಂದಿಕೊಂಡು ಜೀವನ ನಡೆಸಿಕೊಂಡು ಹೋಗಿ ಎಂದು ಹೇಳಿದರು. ಅಕ್ಕಪಕ್ಕದವರೂ ಸಹ ಬುದ್ದಿವಾದ ಹೇಳಿದರು, ಆದರೂ ಸಹ ಆರೋಪಿ ಸರಿಹೋಗಲಿಲ್ಲ.

**2)** ನಂತರ ನನ್ನ ತಂದೆ, ತಾಯಿ ಹಾವೇರಿಗೆ ಕರೆದುಕೊಂಡು ಬಂದರು. ಆರೋಪಿ ನನ್ನ ತವರುಮನೆಗೆ ಬಂದು ಗಲಾಟೆ ಮಾಡಿದ. ಆರೋಪಿ ನನ್ನ ತಂದೆ, ತಾಯಿಗೆ ಮತ್ತು ನನಗೆ ಬೈದು ಹೊಡೆದಿರುತ್ತಾನೆ. ನಂತರ ಪಂಚಾಯತಿ ಮಾಡಿದರು, ಆಗ ಚಾ.ಸಾ-11 ಮತ್ತು ನಮ್ಮ ಊರಿನವರು ಪಂಚಾಯತಿಯಲ್ಲಿ ಇದ್ದರು.

**<u>ಈ ಹಂತದಲ್ಲಿ ಮುಂದುವರೆದ ಮುಖ್ಯ ವಿಚಾರಣೆಗೆ ಕಾಲಾವಕಾಶ ಕೋರಿದ್ದು, ಆಲಿಸಿ ಮುಂದೂಡಲಾಯಿತು.</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ನ. ಸ. ಓ. ಹೇ. ಕೇ. ಸರಿ ಇದೆ.
ಎಂದು ಒಪ್ಪಿರುತ್ತಾರೆ.

ಮುಖ್ಯ ನ್ಯಾಯಿಕ ದಂಡಾಧಿಕಾರಿಗಳು
ಹಾವೇರಿ.